# ಏನು ಇಲ್ಲವೋ ಎರಡು ದಿನದ ಸಂಸಾರ

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 82.
2. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru, page No. 53.
3. **Note:** Lyrics mentioned without highlights are as per Ref. 1 and the lyrics given in yellow highlights are as per Ref. 2.
4. **Note:** Singer has followed lyrics as in Ref. 1.
5. **Note:** Lyrics as per Ref. 2 (given in yellow highlights) seems to be more correct. I advise the music lovers to follow these wordings.
6. **Note:** This song is not available in the books of Sri. Pavanje Guru Rao and also in the books of Gorebala Hanumantha Rayaru.

ರಾಗ: ಕಾಂಬೋಧಿ ತಾಳ: ಆದಿ

| | |
|---|---|
| ಏನು ಇಲ್ಲವೋ ಎರಡು ದಿನದ ಸಂಸಾರ | ಏನು ಇಲ್ಲವೋ ಎರಡು ದಿನದ ಸಂಸಾರ |
| ದಾನ ಧರ್ಮವ ಮಾಡು ಇದನರಿತು ಮನುಜ ॥ ಪ ॥ | ಜ್ಞಾನದಲಿ ದಾನ ಧರ್ಮವ ಮಾಡೊ ಮನುಜ |
| | |
| ಹಸಿದು ಬಂದವರಿಗೆ ಅಶನ-ವೀಯಲು ಬೇಕು | ಹಸಿದು ಬಂದವರಿಗೆ ಅಶನ-ವೀಯಲು ಬೇಕು |
| ಶಿಶುಗಳಿಗೆ ಪಾಲ್ಬೆಣ್ಣೆ ನಡೆಸ ಬೇಕು | ಶಿಶುಗಳಿಗೆ ಪಾಲ್ಬೆಣ್ಣೆ ಇರಿಸ ಬೇಕು |
| ಹಸನಾದ ಭೂಮಿಯನು ಧಾರೆಯರೆಯಲು ಬೇಕು | ಹಸನಾದ ಭೂಮಿಯ ಧಾರೆಯೆರೆಯಲು ಬೇಕು |
| ಭಾಷೆ ಕೊಟ್ಟರೆ ಮಾತು ನಿಜವಿರಲಿ ಬೇಕು ॥ 1 ॥ | ಭಾಷೆ ಕೊಟ್ಟರೆ ಮಾತು ನಿಜವಿರಲು ಬೇಕು |
| | |
| ಕಳ್ಳತನವನು ಮಾಡಿ ಒಡಲ ಹೊರೆಯಲಿ ಬೇಡ | ಕಳ್ಳತನವನು ಮಾಡಿ ಒಡಲ ಹೊರೆಯಲು ಬೇಡ |
| ಸುಳ್ಳನಾಗಿ ನೀನು ತಿರುಗ ಬೇಡ | ತಳ್ಳಿಕಾರನಾಗಿ ತಿರುಗ ಬೇಡ |
| ಒಳ್ಳೆ ಜನಗಳ ನಿಂದೆಯನು ನೀನು ಮಾಡ ಬೇಡ | ಕುಳ್ಳಿರ್ದ ಸಭೆಯಲ್ಲಿ ಕುತ್ಸಿತ-ವಾಡಲು ಬೇಡ |
| ಒಳ್ಳೆಯವನೆಂದರೆ ಹಿಗ್ಗ ಬೇಡ ॥ 2 ॥ | ಉಳ್ಳವ ನಾನೆಂದು ಉಬ್ಬಲು ಬೇಡ |
| | |
| ದೊರೆತನವು ಬಂದಾಗ ಕೆಟ್ಟು ನುಡಿಯಲಿ ಬೇಡ | ದೊರೆ-ತನವನೆ ಮಾಡಿ ಕೆಟ್ಟ ನುಡಿಯಲು ಬೇಡ |
| ಸಿರಿ ಬಂದ ಕಾಲಕ್ಕೆ ಮರೆಯ ಬೇಡ | ಪರ-ಧನಕೆ ಪರ-ಸತಿಗೆ ಅಳುಪ ಬೇಡ |
| ಪರಮ ಪಾವನ ನಮ್ಮ ಪುರಂದರ ವಿಠಲನ | ಧರಣಿಯೊಳಗೆ ನಮ್ಮ ಪುರಂದರ ವಿಠ್ಠಲನ |
| ಚರಣ ಸೇವೆಯ ಮಾಡಿ ಸುಖಿಯಾಗೊ ಮನುಜ ॥ 3 ॥ | ಚರಣ ಸೇವೆಯ ಬಿಟ್ಟು ಇರ-ಬೇಡ ಮನುಜಾ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಸಂಸಾರದ ಅಸ್ಥಿರತೆಯನ್ನು ಮೊದಲು ಹೇಳಿ, ಬಳಿಕ ಜೀವಿಸಿದ ಕಾಲದಲ್ಲಿ ಮನುಷ್ಯನು ಮಾಡ ಬೇಕಾದ ನಿತ್ಯ ಕರ್ಮಗಳು ಯಾವುವೆಂಬುದನ್ನು ಇಲ್ಲಿ ದಾಸರು ಹೇಳಿದ್ದಾರೆ.

**ಅಶನ** = ಅನ್ನ, ಆಹಾರ, ಊಟ

**ಹಸನಾದ** = ಶ್ರೇಷ್ಠವಾದ, ಒಳ್ಳೆಯ

**ತಳ್ಳಿಕಾರ** = ತುಂಟ

**ಉಳ್ಳವ** = ಶ್ರೀಮಂತ, ಬಲ್ಲಿದ

**ಅಳುಪು** = ಇಚ್ಛಿಸು

**Classification:** Keerthane
**Ankita:** purandara vittala
**Location:** NA
**Category:** Jeevana Sutra
**Sub-Category:** dina, samsara, hasive, koosu, benne, halu, bhumi, anna, kalla, udara, sullu, jana, bayyi, srimanta, arasa, rokka, sati, sukha,
**Pravachana:** NA
**Explanation:** NA